ಆರ್. ಮಧುಸೂದನ್, ಹಾಸನ

*'ಲಕ್ಷ್ಮೀಪತಿ' ಎಂಬ ಹೆಸರಿಟ್ಟುಕೊಂಡವರಿಗೇ ಹಣಕಾಸಿನ ತೊಂದರೆ ಹೆಚ್ಚು ಬರುತ್ತದಲ್ಲಾ..?*




'ಕಪ್ಪು–ಲಕ್ಷ್ಮೀಪತಿ' ಎಂದು ಹೆಸರು ಬದಲಾಯಿಸಿಕೊಳ್ಳಲಿ, ಝುಂಂಂ ಎಂದು ಜೀವಿಸಬಹುದು.

ಪಿ.ಜೆ. ರಾಘವೇಂದ್ರ, ಮೈಸೂರು

*ಬುದ್ಧಿ ಕಲಿಸುವ ಶಿಕ್ಷಕರಿಗಿಂತ ಬೂದಿ ನೀಡುವ ಬಾಬಾಗಳಿಗೇ ಹೆಚ್ಚು ಗೌರವ ನೀಡುವುದೇಕೆ?*

ಬಾಲಕರ ಪಡೆಗಿಂತಾ ಹಿಂಬಾಲಕರ ಪಡೆಯಲ್ಲಿಯೇ ಹೆಚ್ಚು ಬೋಳೇತನ ಇರುವುದರಿಂದ!

ಎಸ್.ಜಿ. ಕರನಂದಿ, ಹುನಗುಂದ

*ಸಿನಿಮಾ ತಾರೆಯರಿಗೂ, ರಾಜಕೀಯ ತಾರೆಗಳಿಗೂ ಇರುವ ವ್ಯತ್ಯಾಸವೇನು?*

ರಾಜಕೀಯ ತಾರೆಗಳು ಮೇಕಪ್, ಲೈಟ್, ಬ್ಯಾಕ್ ಗ್ರೌಂಡ್ ಸಾಂಗ್ಸ್, ಏನೂ ಇಲ್ಲದೆಯೂ ಮಿಂಚುತ್ತಾರೆ.

## ಬಹುಮಾನಿತ ಪ್ರಶ್ನೆ

ಕಾಡನೂರು ರಾಮಶೇಷ, ಹುಲಿಮಂಗಲ

*ಭಿಕ್ಷುಕರನ್ನು ಕಂಡರೆ ಬೊಗಳುವ ನಾಯಿಗಳು ಭ್ರಷ್ಟಾಚಾರಿಗಳನ್ನು ಕಂಡಾಗ ಏಕೆ ಬೊಗಳುವುದಿಲ್ಲ?*



ತಮಗೂ ಏನಾದರೂ ಬಿಸ್ಕತ್ ಹಾಕುತ್ತಾನೇನೋ ಎಂಬ ಹಂಬಲ!

ಓಂಕುಮಾರ್ ಬಿ. ಸ್ವಾಮಿ, ಬೀದರ್

*ಮನುಷ್ಯನ ಅತಿ ದೊಡ್ಡ ಮೂರ್ಖತನ ಯಾವುದು?*

ತನ್ನಲ್ಲೇ ಇರುವ ನೆಮ್ಮದಿಯನ್ನು ಇನ್ನೆಲ್ಲೋ ಇದೆಯೆಂದು ಹುಡುಕುವುದು!

ಎಂ.ಬಿ.ಶಿವರಾಂ, ಬೆಂಗಳೂರು

*ಸಂಸಾರಗಳಲ್ಲಿ ಹುಳಿ ಹಿಂಡುವವರಿಗೆ ನಿಮ್ಮ ಬುದ್ಧಿವಾದವೇನು?*

ಸಂಸಾರದಲ್ಲಿ ಹಿಂಡುವ ಬದಲು ಸಾರಲ್ಲಿ ಹುಳಿ ಹಿಂಡುವುದು ಲೇಸು!

ಎಂ.ಎನ್. ಸೋಮಶೇಖರ್, ಮೈಸೂರು

*ದಡ್ಡರನ್ನು ಬುದ್ಧಿವಂತರನ್ನಾಗಿ ಮಾಡುವುದು ಹೇಗೆ?*

ಅವರಿಗಿಂತಲೂ ದಡ್ಡರನ್ನು ಅವರ ಮುಂದೆ ಕೂಡಿಸುವುದರ ಮೂಲಕ!

ಎ. ರಾಜ್‌ಕುಮಾರ್, ಚಿತ್ರದುರ್ಗ

*ಇಲ್ಲೊಬ್ಬ ಶಿಕ್ಷಕರು ಹೆಂಡತಿಯನ್ನು ಮನೆಯಲ್ಲಿ ಕೂಡಿಹಾಕಿ ಶಾಲೆಗೆ ಹೋಗುತ್ತಾರಲ್ಲಾ..?*

ಹೋಂ ವರ್ಕ್ ಮಾಡದೆ ಆಚೆ ಹೋಗಿಬಿಟ್ಟಾಳೆಂದು!

ಹಾಡ್ಯ ಜಯಾನಂದ, ಮೈಸೂರು

*ಆಚೆ ಹೊರಟಾಗ 'ಬೇಗ ಬನ್ನಿ' ಎಂಬ ಆಣತಿ ಪ್ರೀತಿಯಿಂದಲೋ, ಕಾಳಜಿಯಿಂದಲೋ?*

ಎರಡೂ ಅಲ್ಲ? ತನ್ನ ನಿದ್ರೆಗೆ ಕಂಟಕವಾಗದಿರಲೆಂಬ ಮುನ್ನೆಚ್ಚರಿಕೆ!

ಅರಕೆರೆ ಪಿ. ಸುರೇಶ್, ಭದ್ರಾವತಿ

*ಕೋಗಿಲೆಯ ಕಂಠಕ್ಕೂ, ಹುಡುಗಿಯರ ಸೊಂಟಕ್ಕೂ ಏನು ವ್ಯತ್ಯಾಸ?*

ಕೋಗಿಲೆಯ ಕಂಠ ಎಂದೂ ದಪ್ಪವಾಗುವುದಿಲ್ಲ!

ನಗರಿ ಜೀವೇಂದ್ರ ಬಲ್ಲಾಳ್, ಹೆಂಡೆಲು

*ಮೊದಲ ಮಾತು ತಾಯಿಯದೋ, ಮಗುವಿನದೋ?*

ತಾಯಿಯದೇ, ಅದಕ್ಕೇ ತಾಯಿಯನ್ನು 'ಮಾತೇ' ಎನ್ನುವುದು!

ವಿದ್ಯಾನಾಗ್ ಎಂ.ಆರ್. ಬೆಂಗಳೂರು

*ಮುಂದಿನ ಜನ್ಮದಲ್ಲಿ ನೀವು ಏನಾಗಿ ಹುಟ್ಟಲು ಬಯಸುತ್ತೀರಿ?*

ಅಂದರೆ... ಈ ಅಂಕಣದಲ್ಲಿ ಉತ್ತರಿಸುವವರಿಗೆ ಮೋಕ್ಷ ಸಿಗುವುದಿಲ್ಲವೆಂದು ಖಾತ್ರಿಯೇನು?

ಪಿ.ಎನ್. ಶ್ರೀವತ್ಸ, ಬೆಂಗಳೂರು

*ನಗೆ; ಇದರ ನಿಜವಾದ ಅರ್ಥ?*

ನರನನ್ನು ಗೆಲುವಾಗಿ ಇಡಲು ಬೇಕಾದ ದಿವ್ಯೌಷಧ!

ಕೇಶವ ಎನ್. ಪೈ, ಕಾಸರಕೋಡ

*ಅಗ್ನಿ ಸಮೀಪದಲ್ಲಿದ್ದರೆ ಮಾತ್ರ ಸುಡುತ್ತದೆ, ಆದರೆ ಸುಂದರ ಸ್ತ್ರೀಯರು ದೂರದಲ್ಲಿದ್ದರೂ ಸುಡುತ್ತಾರೆ; ಏಕೆ?*

ಸೌಂದರ್ಯದ ಜ್ವಾಲೆಗೆ ಬಯಕೆಯ ತುಪ್ಪ ಬಿದ್ದಾಗ ದಹನಶಕ್ತಿ ನೂರ್ಮಡಿಯಂತೆ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

*ನಾನು ಕಳುಹಿಸಿದ ಪ್ರಶ್ನೆಗಳು ನೀರಿನಲ್ಲಿ ನೆನೆದುಹೋದವೋ, ಅಥವಾ ಕಸದ ಬುಟ್ಟಿ ಸೇರಿದವೋ ಮಿ.ರಾಮ್?*

ನೆನೆಸಿಕೊಳ್ಳುವಂತಹ ಪ್ರಶ್ನೆಗಳನ್ನು ಕಳುಹಿಸಿ, ಬುಟ್ಟಿಗಟ್ಟಲೆ ಉತ್ತರಿಸಲಾಗುವುದು!

ಕೊ.ಸು. ನರಸಿಂಹಮೂರ್ತಿ, ಮೈಸೂರು

*ಎಲ್ಲರನ್ನೂ ಬದುಕಿಸುತ್ತಿದ್ದ ಬಾಬಾರನ್ನು 'ಸಾಯಿ...ಬಾಬಾ' ಎನ್ನಲು ಕಾರಣವೇನು?*

ಹಾಳುನಾಲಿಗೆಗೆ ಸಿಕ್ಕಿ ಬಾಬಾ ಕೆಟ್ಟರು.. ಸಾಯಿ ಎಂಬುದು 'ಸ್ವಾಹೀ' 'ರಕ್ಷಿಸು' ಎಂಬುದರ ಅಪಭ್ರಂಶ.

ವಿ. ಹಮೀದ್, ವಿಟ್ಲ

*ನಿಮ್ಮ ಹೆಂಡತಿ ನಿಮ್ಮನ್ನು ಯಾವಾಗ ಶ್ಲಾಘಿಸಿದ್ದಾರೆ?*

ಒಂದೇ ಒಂದು ಬಾರಿ! ಮುಖ್ಯಮಂತ್ರಿಗಳಿಗೆ ಹೋಲಿಸಿದರೆ ನೀವು ಭಂಡರೇ ಅಲ್ಲ, ಎಂದು ಶ್ಲಾಘಿಸಿದ್ದಳು!

ಎ.ಎಸ್. ಸ್ವಾಮಿ, ಶೋರಾಪುರ

*'ಮೀನಿನ ಹೆಜ್ಜೆ' ಎಂದರೇನು?*



ಕಾಲಿಲ್ಲದ ಕಾಲುಗಳು ಹಾದಿಯಲ್ಲದ ಹಾದಿಯಲ್ಲಿ ಗುರುತಿಲ್ಲದಂತೆ ಮೂಡಿಸುವ ಗುರುತುಗಳು!

ಕೆ.ಎನ್. ಕನಕಾಂಬಿಕ, ಶಂಕರಘಟ್ಟ

*ನಾನು ಕನಸು ಕಂಡ ಕನ್ಯೆಯೇ ನನ್ನವಳಾದರೆ ಬದುಕು ಏನಾಗಬಹುದು?*

ನಿದ್ರಿಸುತ್ತಿರುವಷ್ಟು ಕಾಲವೂ ಚೆನ್ನಾಗಿರಬಹುದು.

ದೇಶವಳ್ಳಿ ಶಿವು, ಸಂತೇಮರಹಳ್ಳಿ

*ಪ್ರತಿ ಪುರುಷನ ಯಶಸ್ಸಿನ ಹಿಂದೆ ಒಬ್ಬ ಹೆಣ್ಣು ಇರುತ್ತಾಳೆ; ಪ್ರತಿ ಯಶಸ್ವಿ ಹೆಣ್ಣಿನ ಹಿಂದೆ...?*

ಅವಳ ಕೈ ಹಿಡಿಯಲು ಪುರುಷರ ಕ್ಯೂ ಇರುತ್ತದೆ!

ಬಾ.ರಾ. ಸುರೇಶ್, ಶಿವಮೊಗ್ಗ

*ನವದಂಪತಿಗಳು ಏನನ್ನು ಅನುಸರಿಸಬೇಕು?*

ಒಬ್ಬರನ್ನೊಬ್ಬರು ಅನುಸರಿಸಿದರೆ ಸಾಕು!

■ ರಾಮ್